# ಸಾಕ್ಸ್ ಫ್ಯಾಕ್ಟ್ಸ್



**ಹಲವು ಬಗೆಯ ವಿನ್ಯಾಸ, ಬಣ್ಣ, ಆಕಾರಗಳಲ್ಲಿ ಸಿಗುವ ಸಾಕ್ಸ್ ಇವತ್ತು ಫ್ಯಾಷನ್ ಸ್ಟೇಟ್‌ಮೆಂಟ್ ಕೂಡ ಹೌದು. ಪಾದಗಳನ್ನು ಬೆಚ್ಚಗಿಡುತ್ತಲೇ ಕಾಲಾಂತರದಲ್ಲಿ ಬದಲಾಗುತ್ತಾ ಬಂದಿರುವ ಸಾಕ್ಸ್ ಕುರಿತ ಆಸಕ್ತಿಕರ ಫ್ಯಾಕ್ಟ್ಸ್ ಇದೋ...**

**■ ವಿಶಾಖ ಎನ್.**

ಅಂಗಾಲಿಗೆ ಆತುಕೊಂಡ ದುಬಾರಿ ಸ್ಯಾಂಡಲ್. ಚಪ್ಪಲಿ ಎಂದೇನಾದರೂ ಹೇಳಿದರೆ ನಗರದ ನಾಜೂಕು ಜನ, 'ಇದನ್ನು ಸ್ಯಾಂಡಲ್ ಅನ್ನಬೇಕು' ಎಂದೇ ಕರೆಕ್ಷನ್ ಹಾಕುತ್ತಾರೆ. ಅಂತಹ ಸ್ಯಾಂಡಲ್ ಹಾಕುವಾಗ ಹೆಣ್ಣಾಗಲೀ, ಗಂಡಾಗಲೀ ಸಾಕ್ಸ್ ತೊಡುವುದೀಗ ವ್ಯಾಪಕ. ಇಂತಹ ಅಭ್ಯಾಸ ಇಲ್ಲದವರು, 'ಚಪ್ಪಲಿಗೇಕೆ ಸಾಕ್ಸ್ ಬೇಕು' ಎಂದು ಹುಬ್ಬೇರಿಸಿ ಪ್ರಶ್ನಿಸುವುದೂ ಇದೆ. ಸಾಕ್ಸ್ ತೊಟ್ಟರೆ ಪಾದಗಳು ಬೆಚ್ಚಗಿರುತ್ತವೆ. ಚಪ್ಪಲಿಯ ಆರೋಗ್ಯವೂ ಚೆನ್ನಾಗಿರುತ್ತದೆ. ಯಾಕೆಂದರೆ, ಅನೇಕರ ಅಂಗಾಲಿನಿಂದ ಒಸರುವ ಬೆವರು ಸ್ಯಾಂಡಲ್‌ಗಳ ಮುಖ್ಯ ಚರ್ಮದ ಭಾಗದ ಮೇಲೆ ಇಡೀ ಪಾದದ ಗುರುತನ್ನೇ ಮೂಡಿಸಿಬಿಡುತ್ತದೆ. ಸಾಕ್ಸ್ ಯಾಕೆ ತೊಡಬೇಕು ಎಂಬ ಪ್ರಶ್ನೆಗೆ ಇದು ಬಹುಜನರಿಗೆ ತಿಳಿದಿರುವ ಉತ್ತರ. ಆದರೆ, ಸಾಕ್ಸ್‌ನ ಇತಿಹಾಸ ಬಲ್ಲವರೆಷ್ಟು? ಸಂಖ್ಯೆ ದೊಡ್ಡದಂತೂ ಅಲ್ಲ.

ಹಳೆಯ ಇಂಗ್ಲಿಷ್‌ನಲ್ಲಿ '**Socc**' ಎಂಬ ಪದವಿದೆ. ಹಗುರವಾದ ಚಪ್ಪಲಿ ಎಂದು ಇದರರ್ಥ. ಲ್ಯಾಟಿನ್‌ನಲ್ಲಿ '**Soccus**' ಎಂಬ ಪದಬಳಕೆಯಿಂದ ಹುಟ್ಟಿದ ಇಂಗ್ಲಿಷ್ ಪದವೇ '**Socc**'. ರೋಮ್‌ನಲ್ಲಿ ಹಾಸ್ಯ ಕಲಾವಿದರು ತೊಡುತ್ತಿದ್ದ ಚಪ್ಪಟೆ ತಳದ ಚಪ್ಪಲಿಗೆ ಈ ಹೆಸರಿತ್ತು. ಗ್ರೀಸ್ ರಂಗಭೂಮಿಯಲ್ಲಿ ಕಲಾವಿದರು ತೊಡುತ್ತಿದ್ದ ಹಗುರ ಚಪ್ಪಲಿಗಳಿಗೆ '**Sykchos**' ಎನ್ನುತ್ತಿದ್ದರು. ಕ್ರಿ.ಪೂ. 5000ದಲ್ಲಿ ಪ್ರಾಣಿಗಳ ಚರ್ಮದಿಂದ ತಯಾರಿಸಿದ ಅಥವಾ ಗಿಡ–ಬಳ್ಳಿಗಳಿಂದ ಮಾಡಿದ ಮೆತ್ತನೆಯ ಸಾಕ್ಸ್‌ಗಳನ್ನು ತೊಡುತ್ತಿದ್ದರು. ಇದರರ್ಥ ಶಿಲಾಯುಗದಲ್ಲೂ ಸಾಕ್ಸ್ ಬಳಕೆಯಲ್ಲಿ ಇತ್ತು. ಪಾದಗಳು ಸೀಳುವುದನ್ನು, ಕಲ್ಲುಗಳು ಅವುಗಳ ಒತ್ತುವುದನ್ನು ತಪ್ಪಿಸಲು ಮೆತ್ತನೆಯ ಇಂತಹ ಸಾಕ್ಸ್‌ಗಳನ್ನು ತೊಡುತ್ತಿದ್ದರೆನ್ನುವುದಕ್ಕೆ ಗುಹಾಂತರ ಪೇಂಟಿಂಗ್‌ಗಳು ಸಾಕ್ಷ್ಯ ಒದಗಿಸುತ್ತವೆ. ಅವುಗಳು ದೀರ್ಘಾವಧಿ ಬಾಳಿಕೆ ಬರುತ್ತಿರಲಿಲ್ಲವಷ್ಟೆ.

ಕ್ರಿಸ್ತಪೂರ್ವದ ಮಾತಾಯಿತು. ಕ್ರಿಸ್ತಶಕ ಐದನೇ ಶತಮಾನಕ್ಕೆ ಬರೋಣ. ಕ್ಯಾಥೋಲಿಕ್ ಚರ್ಚ್‌ನಲ್ಲಿ 'ಪುಟ್ಟೀಸ್' ಎನ್ನುವ ಸಾಕ್ಸ್‌ಗಳನ್ನು ತೊಟ್ಟು ಪ್ರಾರ್ಥನೆ ಮಾಡುವ ಪರಿಪಾಟ ಶುರುವಾಯಿತು. ಹೆಬ್ಬೆರಳನ್ನೇ ಪ್ರತ್ಯೇಕವಾಗಿ ಆವರಿಸುವಂತೆ ಮಾಡುವ ಈ ಸಾಕ್ಸ್‌ಗಳನ್ನು ಸೂಜಿ ಬಳಸಿ ಉಲ್ಲನ್‌ನಲ್ಲಿ ನೇಯುತ್ತಿದ್ದರೆನ್ನುವುದಕ್ಕೂ ಪುರಾವೆಗಳಿವೆ. ವಿಕ್ಟೋರಿಯಾ ಅಂಡ್ ಆಲ್ಬರ್ಟ್ ಮ್ಯೂಸಿಯಂನಲ್ಲಿ ಇಂತಹ ಸಾಕ್ಸ್‌ಗಳು ಪ್ರದರ್ಶನಕ್ಕಿವೆ.

ಅಲ್ಲಿಂದ ಇನ್ನೂ ಹತ್ತು ಶತಮಾನ ಮುಂದಕ್ಕೆ ಬಂದರೆ ಸಿಲ್ಕ್, ಮಕಮಲ್ಲು, ಉಣ್ಣೆ ಎಲ್ಲ ಬಗೆಯ ಸಾಕ್ಸ್‌ಗಳು ಬಳಕೆಗೆ ಬಂದವು. ಪ್ರತಿಷ್ಠಿತ ಕುಟುಂಬದ ಜನರಿಗೆ ಸಾಕ್ಸ್ ಎನ್ನುವುದೊಂದು ಶ್ರೀಮಂತಿಕೆಯ ಸಂಕೇತವೇ ಆಯಿತು. ಪಾದದಾಕಾರಕ್ಕೆ ತಕ್ಕಂತೆ ಹಿಗ್ಗಬಹುದಾದ ರೇಷಿಮೆ, ಉಣ್ಣೆ, ಮಕಮಲ್ಲನ್ನು ಆಯ್ಕೆ ಮಾಡಿಕೊಳ್ಳುವುದೂ ಆಗ ಕುಸುರಿ ಕೆಲಸ